

# ಬನ್ ಅಲ್ಲ, ಹೇರ್ ಬನ್!

ಯುಗಗಳೆಷ್ಟೇ ಕಳೆದರೂ ಫ್ಯಾಷನ್ ಲೋಕದಿಂದ ಮರೆಯಾಗದೇ ಉಳಿದ ಕೇಶವಿನ್ಯಾಸ ಎಂದರೆ ತುರುಬು ಫ್ಯಾಷನ್ ಅಥವಾ ಹೇರ್‌ಬನ್. ಹೆಚ್ಚಾಗಿ ಯುವತಿಯರ ಹಾಟ್ ಫೇವರೆಟ್ ಆಗಿದ್ದ ಈ ಕೇಶವಿನ್ಯಾಸ ಈಗ ಎಲ್ಲರಿಗೂ ಅಚ್ಚುಮೆಚ್ಚು.

■ ಸುರೇಖಾ ಹೆಗಡೆ

ನಿತ್ಯ ನೂತನವಾಗೇ ಇರುವ ಫ್ಯಾಷನ್‌ಲೋಕದಲ್ಲಿ ಹೊಸತನದ ಹುಟ್ಟಿಗೆ ಬರವಿಲ್ಲ. ಆಧುನಿಕತೆಯ ಬಣ್ಣವನ್ನು ಹೊತ್ತು ಪ್ರತಿ ಕ್ಷಣವೂ ಚಿಗುರುತ್ತಲೇ ಇರುವ ವಿನ್ಯಾಸ ಕ್ಷೇತ್ರದಲ್ಲಿ ಸರ್ವಕಾಲಕ್ಕೂ ಸದ್ದು ಮಾಡುತ್ತಿದೆ ತುರುಬು ಫ್ಯಾಷನ್.

ಮುಡಿ ಕಟ್ಟುವುದು ಅಥವಾ ಹೇರ್‌ಬನ್ ವಿನ್ಯಾಸವನ್ನು ಹೆಚ್ಚಾಗಿ ಯುವತಿಯರು ಹಾಕುತ್ತಿದ್ದರು. ಆದರೀಗ ತುರುಬು ವಯಸ್ಸಿನ ಹಂಗಿಲ್ಲದೆ ಎಲ್ಲರನ್ನೂ ಅಲಂಕರಿಸುತ್ತಿದೆ. ಎಲ್ಲ ಬಗೆಯ ದಿರಿಸಿಗೆ ಹಾಗೂ ಸಂದರ್ಭಕ್ಕೆ ಹೊಂದಿಕೊಳ್ಳುವಂಥ ಬಗೆಬಗೆಯ ವಿನ್ಯಾಸ ಹುಟ್ಟಿಕೊಂಡಿರುವುದೇ ತುರುಬು ಫ್ಯಾಷನ್‌ನ ಜನಪ್ರಿಯತೆಗೆ ಕಾರಣವಾಗಿದೆ. ಸಿನಿಮಾ ಮಂದಿ ಸಹ ಕಾರ್ಯಕ್ರಮಗಳಲ್ಲಿ ಹೇರ್‌ಬನ್ ಕೇಶವಿನ್ಯಾಸದಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅದರಲ್ಲೂ ಸಾಂಪ್ರದಾಯಿಕ ಉಡುಗೆ ತೊಟ್ಟಾಗ ಹೇರ್‌ಬನ್ ಕೇಶವಿನ್ಯಾಸವೇ ಪರ್ಫೆಕ್ಟ್ ಎಂಬಂತಾಗಿದೆ.

ಸಾಂಪ್ರದಾಯಿಕ ಹಾಗೂ ಆಧುನಿಕ ಶೈಲಿಯ ತೊಡುಗೆಗೆ ಹೇರ್‌ಬನ್ ಕೇಶವಿನ್ಯಾಸ ಹೊಂದಿಕೊಳ್ಳುತ್ತದೆ. ಆದರೆ ಭಾರತೀಯರ ಸಾಂಪ್ರದಾಯಿಕ ತೊಡುಗೆಯಾದ ಸೀರೆ ಧರಿಸಿದಾಗ ಮುಡಿ ಕಟ್ಟಿದರೆ ಅಂದ ದುಪ್ಪಟ್ಟಾಗುತ್ತದೆ. ಹೀಗಾಗಿಯೇ ಈ ಯುಗದ ಮದುಮಗಳೂ ಸಹ ಮದುವೆಯ ದಿನ ತುರುಬು ಕಟ್ಟಿಕೊಳ್ಳುವುದಕ್ಕೇ ಹೆಚ್ಚು ಆದ್ಯತೆ ನೀಡುತ್ತಿದ್ದಾಳೆ.

ಹೇರ್‌ಬನ್ ಹಾಕುವುದು ಸುಲಭ ಹಾಗೂ ಸರಳ. ಕೂದಲಿನ ನಿರ್ವಹಣೆ ಮಾಡಿಕೊಳ್ಳುವುದು ಸುಲಭ ಎನ್ನುವ ಕಾರಣಕ್ಕೇ ಈ ಕೇಶವಿನ್ಯಾಸ ಎಲ್ಲರ ಮೆಚ್ಚುಗೆ ಗಳಿಸಿಕೊಳ್ಳುತ್ತಿದೆ. ಕೂದಲು ಉದ್ದವಿದ್ದವರು ಮುಡಿ ಕಟ್ಟಿ ಒಂದು ಮಲ್ಲಿಗೆ ಮಾಲೆಯಿಂದ ಅದನ್ನು ಸಿಂಗರಿಸುತ್ತಿದ್ದರು. ಆದರೆ ಅದು ಹಳೆಯ ಫ್ಯಾಷನ್. ಈಗ ಕೂದಲು ಉದ್ದವಿರಲಿ, ಚಿಕ್ಕದಾಗಿರಲಿ, ರೇಷ್ಮೆಯಂಥ ಕೂದಲಿರಲಿ, ಗುಂಗುರು ಕೂದಲಿರಲಿ ಬನ್ ಹಾಕಿಕೊಳ್ಳಬಹುದು. ಅದಕ್ಕೆ ಅನುಕೂಲವಾಗುವಂತೆ ಅನೇಕ ಬಗೆಯ ಹೇರ್‌ಬನ್‌ಗಳು, ಆಕ್ಸೆಸರಿಗಳು ಲಭ್ಯ.

ಹೇರ್‌ಬನ್ ಹಾಕುವುದರಲ್ಲಿಯೂ ನೂರಾರು ಬಗೆಯಿದ್ದು ಮದುವೆ, ಉಪನಯನದಂತಹ ವಿಶೇಷ ಕಾರ್ಯಕ್ರಮಗಳಿಗೆ ಒಪ್ಪುವಂಥ ಕೆಲವು ವಿನ್ಯಾಸಗಳ ವಿವರ ಇಲ್ಲಿದೆ.

## ಫ್ಲವರ್ ಬನ್

ಯಾವುದೇ ಕಾರ್ಯಕ್ರಮವಿರಲಿ ಅಲ್ಲಿ ವಿಭಿನ್ನ ಹೂವುಗಳದ್ದೇ ಕಾರುಬಾರು. ಅದರಲ್ಲೂ

